**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 348/2023**

ಚಾ.ಸಾ–06, ಪ್ರಾ.ಸಾ–08

| | | |
|---|---|---|
| ಹೆಸರು | : | ಕುಮಾರಿ ಚಿಕ್ಕಮ್ಮತಾಯಿ |
| ತಂದೆಯ ಹೆಸರು | : | ಕೆಂಪಾಚಾರಿ |
| ವಯಸ್ಸು | : | 20 |
| ವೃತ್ತಿ | : | ಖಾಸಗಿ ಕೆಲಸ |
| ವಾಸ | : | ಕೊತ್ತೇಗಾಲ ಗ್ರಾಮ, ತಿ. ನರಸೀಪುರ ತಾಲ್ಲೂಕು |

**ದಿನಾಂಕ 07.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಫ್ರಾಸಾ–3 ನನ್ನ ಸ್ನೇಹಿತೆ. ದಿನಾಂಕ 29.05.2023 ರಂದು ನಾನು ಮತ್ತು ಫ್ರಾಸಾ–3 ರವರು ತಿ. ನರಸೀಪುರದಿಂದ ಕುರುಬೂರಿಗೆ ಎಸ್.ಎಂ.ಆರ್. ಖಾಸಗಿ ಬಸ್‌ನಲ್ಲಿ ಹೋಗುತ್ತಿರುವಾಗ ಮಧ್ಯಾಹ್ನ 2.10 ಗಂಟೆ ಸಮಯದಲ್ಲಿ ಕುರುಬೂರು ಗ್ರಾಮದ ಹತ್ತಿರ ಸದರಿ ಬಸ್ ಮತ್ತು ಎದುರಿಗೆ ಬರುತ್ತಿದ್ದ ಕಾರಿನ ನಡುವೆ ಅಪಘಾತವಾಗಿರುತ್ತದೆ. ಅಪಘಾತವು ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ಅಪಘಾತದಿಂದ ನನ್ನ ಬಲಗಾಲಿಗೆ ಪೆಟ್ಟಾಗಿರುತ್ತದೆ. ಫ್ರಾಸಾ–3 ರವರ ತಲೆಗೆ ಪೆಟ್ಟಾಗಿರುತ್ತದೆ. ಆ ಕಾರಿನಲ್ಲಿ ಇದ್ದವರೆಲ್ಲರೂ ಮರಣ ಹೊಂದಿರುತ್ತಾರೆ. ಆ ಬಸ್‌ನ ಚಾಲಕನನ್ನು ನಾನು ನೋಡಿಲ್ಲ.

ನನ್ನನ್ನು ತಿ. ನರಸೀಪುರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ಅಲ್ಲಿ ನಾನು ಚಿಕಿತ್ಸೆ ಪಡೆದಿರುತ್ತೇನೆ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ಸದರಿ ಬಸ್‌ನ ಚಾಲಕ ಬಸ್‌ನ್ನು ಅತಿವೇಗವಾಗಿ ಚಾಲನೆ ಮಾಡಿದ್ದರಿಂದ ಅಪಘಾತವಾಗಿದೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಕೆ.ಕೆ.ಎನ್. ವಕೀಲರಿಂದ ಆರೋಪಿತನ ಪರ**

ನಾನು ಅಪಘಾತದ ವೇಳೆಗೆ ತಿ. ನರಸೀಪುರದ ವಿದ್ಯೋದಯ ಕಾಲೇಜಿನಲ್ಲಿ ದ್ವಿತೀಯ ಪಿ.ಯು.ಸಿ. ವ್ಯಾಸಂಗದಲ್ಲಿದ್ದೆ. ಅಪಘಾತದ ದಿನ ಮಧ್ಯಾಹ್ನ 1.30 ಗಂಟೆಗೆ ತಿ. ನರಸೀಪುರದ ಖಾಸಗಿ ಬಸ್ ನಿಲ್ದಾಣದಿಂದ ಖಾಸಗಿ ಬಸ್‌ಗೆ ಹತ್ತಿದ್ದೆ. ನಾನು ಆ ಬಸ್‌ನ ಹಿಂದಿನ ಆಸನದಲ್ಲಿ ಕುಳಿತಿದ್ದೆ. ಹಾಗಾಗಿ, ಆ ಬಸ್‌ನ ಮುಂದೆ ನನಗೆ ಕಾಣುತ್ತಿರಲಿಲ್ಲ ಎಂದರೆ ಸರಿ.

ಅಪಘಾತದ ಸ್ಥಳದ ರಸ್ತೆಯಲ್ಲಿ ತಿರುವು ಇದೆ ಎಂದರೆ ಸರಿ. ಹಾಗಾಗಿ ಅಲ್ಲಿ ಬಸ್ ನಿಧಾನವಾಗಿ ಚಲಿಸುತ್ತದೆ ಎಂದರೆ ಸರಿ. ಸದರಿ ಬಸ್ ಕೂಡ ಅಲ್ಲಿ ನಿಧಾನವಾಗಿ ಚಲಿಸಿತ್ತು ಎಂದರೆ ಸರಿ. ಎದುರಿಗೆ ಬರುತ್ತಿದ್ದ ಕಾರು ವೇಗವಾಗಿ ಬರುತ್ತಿತ್ತು ಎಂದರೆ

ಸರಿ. ಅಪಘಾತಕ್ಕೆ ಆ ಕಾರಿನ ಚಾಲಕನ ಅತಿವೇಗ ಚಾಲನೆ ಕಾರಣವಾಗಿತ್ತು ಎಂದರೆ ಸರಿ. ಆಪಘಾತಕ್ಕೆ ಬಸ್‌ನ ಚಾಲಕನ ತಪ್ಪು ಇಲ್ಲ ಎಂದರೆ ಸರಿ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**